## <u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಂತಾಮಣಿ.</u>

## <u>ಸಿ.ಸಿ.ನಂ.118/2016</u>

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಕೃಷ್ಣಾರೆಡ್ಡಿ** | | |
| **ಗಂಡಃತಂದೇಃಹೆಸರು** | **ಕೆಂಪರೆಡ್ಡಿ** | **ಪಿಡಬ್ಲೂಃ** | **2** |
| **ವಯಸ್ಸುಃ** | **69 ವರ್ಷ** | **ಸಿಡಬ್ಲೂಃ** | **1** |
| **ಉದ್ಯೋಗಃ** | **ವ್ಯವಸಾಯ** | | |
| **ವಾಸ ಸ್ಥಳಃ** | **ಸಿಂಗಸಂದ್ರ** | | |

**<u>ದಿನಾಂಕ 28-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ನ್ಯಾಯಾಲಯದಿಂದಃಃ-</u>**

ಚಾ.ಸಾ.2 ನನ್ನ ಮಗ. ಚಾ.ಸಾ.3 ರಿಂದ ಚಾ.ಸಾ.5 ರವರ ಪರಿಚಯ ನನಗೆ ಇದೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ನನಗೆ ಇದೆ. ಯಾವುದೇ ಅಪಘಾತವಾಗಿಲ್ಲ. ನನಗೆ ಪ್ರಕರಣದ ಬಗ್ಗೆ ಗೊತ್ತಿಲ್ಲ. ನಾನು ಪೋಲಿಸರಿಗೆ ಯಾವುದೇ ದೂರನ್ನು ನೀಡಿಲ್ಲ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ದೂರನ್ನು ನಿ.ಪಿ.2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ನಮ್ಮ ಮಗ ಬಿದ್ದು ಹೋಗಿದ್ದ, ಆ ವಿಚಾರವಾಗಿ ನಾನು ಸಹಿ ಮಾಡಿದ್ದೆ. ನಿ.ಪಿ.2 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಗೊತ್ತಿಲ್ಲ. ಪೋಲಿಸರು ಸಹಿ ಮಾಡು ಎಂದಿದ್ದಕ್ಕೆ ಸಹಿ ಮಾಡಿದ್ದೆ.

ಸಿಡಬ್ಲ್ಯೂ: 1

ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.

**(ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲಾಯಿತು.)**

**ಪಾಟೀ ಸವಾಲು:: ಮಾನ್ಯ ನ್ಯಾಯಾಲಯದಿಂದ::-**

ದಿನಾಂಕ:10.01.2015 ರಂದು ಬೆಳಿಗ್ಗೆ 7.00 ಗಂಟೆ ಸಮಯದಲ್ಲಿ ಚಿಂತಾಮಣಿಯ ಸುಜನಹಳ್ಳಿಗೆ ಹೋಗುವುದಾಗಿ ನನ್ನ ವಾಹನ ಅದರ ಸಂಖ್ಯೆ ಕೆಎ 05 ಇ ಬಿ 188 ಸುಜುಕಿ ವಾಹನದಲ್ಲಿ ಹೋಗಿದ್ದು ಬೆಳಿಗ್ಗೆ 8.00 ಗಂಟೆ ಸಮಯದಲ್ಲಿ ನಮ್ಮ ಗ್ರಾಮದ ಕೃಷ್ಣಪ್ಪ ಬಂದು ನನ್ನ ಮಗನಿಗೆ ಅಪಘಾತವಾಗಿದೆ, ನನಗೆ ಕೊತ್ತೂರು ಗ್ರಾಮದ ಪರಿಚಯಸ್ಥರು ಹೇಳಿದ್ದರು ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ಆಗ ನಾನು, ನಾರಾಯಣಸ್ವಾಮಿ ಸ್ಥಳಕ್ಕೆ ಹೋಗಿ ನೋಡಿದಾಗ ಅಪಘಾತವಾಗಿತ್ತು ಎಂದರೆ ಸರಿಯಲ್ಲ. ಆಗ ನಾನು ಅಲ್ಲಿ ವಿಚಾರಿಸಿದಾಗ ಚಿಂತಾಮಣಿ ಸರ್ಕಾರಿ ಆಸ್ಪತ್ರೆಗೆ ಚಾ.ಸಾ.2 ರವರನ್ನು ಕರೆದುಕೊಂಡು ಹೋಗಿರುವುದು ತಿಳಿದಿತ್ತು ಎಂದರೆ ಸರಿಯಲ್ಲ. ಆಗ ಆಸ್ಪತ್ರೆಗೆ ಹೋಗಿ ನೋಡುವಷ್ಟರಲ್ಲಿ ನನ್ನ ಮಗ ಚಾ.ಸಾ.2 ರವರನ್ನು ಇಲಾಜು ಬಗ್ಗೆ ದಾಖಲಿಸಿದ್ದರು, ಚಾ.ಸಾ.2 ರವರನ್ನು ವಿಚಾರಿಸಿದಾಗ ಸುಜನಹಳ್ಳಿಗೆ ಹೋಗುತ್ತಿರುವಾಗ ಎನ್.ಕೊತ್ತೂರು ಬಳಿ ಇರುವ ದರ್ಗಾದ ಬಳಿ ಕೋಟಗಲ್ ಕಡೆಯಿಂದ ಬರುತ್ತಿದ್ದು, ಆರೋಪಿ ತನ್ನ ವಾಹನ ಅದರ ಸಂಖ್ಯೆ ಹೆಚ್ ಆರ್ 51 ಜೆ 6023 ದ್ವಿಚಕ್ರ ವಾಹನದ ಸವಾರ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಎಡಬದಿಯಲ್ಲಿ ಹೋಗುತ್ತಿದ್ದ ಚಾ.ಸಾ.2 ರವರ ವಾಹನಕ್ಕೆ ಡಿಕ್ಕಿಪಡಿಸಿದ ಪರಿಣಾಮ, ಆತ ರಸ್ತೆಯ ಮೇಲೆ ಬಿದ್ದು ಹೋದೆ, ಆಗ ಚಾ.ಸಾ.2 ರವರ ಎಡಮುಂಗೈಗೆ ಮೂಳೆ ಮುರಿತದ ಗಾಯವಾಗಿದ್ದು, ಬಲಗೈ ಹೆಬ್ಬೆರಳು ಮತ್ತು ಎಡಗಡೆಯ ದವಡೆಗೆ ತೀವ್ರ ತರವಾದ ಗಾಯಗಳು ಆಗಿದ್ದವು ಎಂದು ತಿಳಿಸಿದ್ದರು

ಎಂದರೆ ಸರಿಯಲ್ಲ. ನಂತರ ವೈದ್ಯರ ಸಲಹೆಯ ಮೇರೆಗೆ ಕೋಲಾರದ ಆರ್.ಎಲ್.ಜಾಲಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನಾನು ಪೋಲಿಸರಿಗೆ ದೂರು ನೀಡಿದ್ದೆ ಎಂದರೆ ಸರಿಯಲ್ಲ.

ಆರೋಪಿಯೊಂದಿಗೆ ರಾಜಿಮಾಡಿಕೊಂಡದ್ದಕೋಸ್ಕರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲು: ಶ್ರೀ.ವಿ.ವಿ.ಆರ್. ಆರೋಪಿ ಪರ ವಕೀಲರಿಂದ:- ಇಲ್ಲ.**
**ಮರು ವಿಚಾರಣೆ ಇಲ್ಲ.**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.